Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

*2018 ಜುಲೈ 3,*

ನಂಬ್ರ. 23029/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *1193 ಮಿಥುನ 19/*

*1940 ಆಷಾಢ 12.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಜುಲೈ 3ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 21ನೇ ಅಧಿನಿಯಮ

# 2018ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ

1994ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1994ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2017 ನವಂಬರ್ 1ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 31ನೇ ವಿಭಾಗಕ್ಕಿರುವ ತಿದ್ದುಪಡಿ.—1994ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ (1994ರ 5) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 31ನೇ ವಿಭಾಗದ (3)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(3) ವಿಶ್ವವಿದ್ಯಾಲಯದ ಅಧ್ಯಾಪಕರ ನಿವೃತ್ತಿ ಪ್ರಾಯವು,—

(ಎ) ವಿಶ್ವವಿದ್ಯಾಲಯ ಅನುದಾನ ಆಯೋಗದ ರೆಗ್ಯುಲೇಶನ್ ಪ್ರಕಾರದ ಅರ್ಹತೆ ಹೊಂದಿದ ಅಧ್ಯಾಪಕರಿಗೆ ಅರುವತ್ತು ವರ್ಷ ಹಾಗೂ ಅಂತಹ ಒಬ್ಬ ಅಧ್ಯಾಪಕನ ನಿವೃತ್ತಿ ದಿನಾಂಕವು ಶೈಕ್ಷಣಿಕ ವರ್ಷದಲ್ಲಿ ಒಳಪಡುವುದಾದರೆ ಆತನು ಆ ಶೈಕ್ಷಣಿಕ ವರ್ಷವು

ಮುಗಿಯುವ ವರೆಗೆ ಸೇವೆಯಲ್ಲಿ ಮುಂದುವರಿಯತಕ್ಕದ್ದಾಗಿದೆ. ಅಂತಹ ಅಧ್ಯಾಪಕರ ಸೇವಾ ಅನುಕೂಲತೆಗಳು ಕೇರಳ ಸೇವಾ ನಿಯಮಗಳ ಭಾಗ 1ರ 60ನೇ ನಿಯಮದ ಉಪ-ನಿಯಮ (ಸಿ) ಅನುಸರಿಸಿ ಆಗಿರತಕ್ಕದ್ದು; ಹಾಗೂ

(ಬಿ) ವಿಶ್ವವಿದ್ಯಾಲಯದ (ಎ) ಖಂಡದಲ್ಲಿ ಒಳಪಡದ ಅಧ್ಯಾಪಕರ ಹಾಗೂ ಅಧ್ಯಾಪಕೇತರ ಸಿಬ್ಬಂದಿಗಳ, ಅಧಿಕಾರಿಗಳ ಮತ್ತು ಇತರ ನೌಕರರ ವಿಷಯದಲ್ಲಿ, ಸರಕಾರವು ಕಾಲಾಕಾಲದಲ್ಲಿ ಸರಕಾರಿ ಸೇವೆಯಲ್ಲಿರುವ ನೌಕರರ ನಿವೃತ್ತಿ ಪ್ರಾಯವು ನಿರ್ಧರಿಸಬಹುದಾದಂತೆ ಅನ್ವಯವಾಗುವುದಾಗಿದೆ:

ಆದರೆ, ಅಲ್ಪಾವಧಿ ಕರಾರಿನ ಪ್ರಕಾರ ಮೂರು ವರ್ಷಕ್ಕಿಂತ ಮೀರದ ಕಾಲಾವಧಿಗೆ ತಾತ್ಕಾಲಿಕವಾಗಿ ನೇಮಿಸಲ್ಪಡುವ ಯಾವುದೇ ವ್ಯಕ್ತಿಯ ವಿಷಯದಲ್ಲಿ, ಈ ಉಪ-ವಿಭಾಗದಲ್ಲಿ ಹೇಳಿದಂತಹ ಪ್ರಾಯ ಮಿತಿಯು ಅನ್ವಯಿಸುವುದಲ್ಲ:

ಮತ್ತೂ ಅಲ್ಲದೆ, ಅಲ್ಪಾವಧಿ ಕರಾರಿನ ಪ್ರಕಾರದ ನೇಮಕಾತಿಯು ಶಾಸನಗಳಲ್ಲಿ ನಿಗದಿಪಡಿಸಿದ ರೀತಿಯಲ್ಲಿ ರಚಿಸಲ್ಪಟ್ಟ ಸೆಲೆಕ್ಷನ್ ಕಮಿಟಿಯ ಅಂಗೀಕಾರ ಅನುಸರಿಸಿ ಆಗಿರತಕ್ಕದ್ದು.".

3. ರದ್ಧತಿ ಮತ್ತು ರಕ್ಷಣೆ.—(1) 2018ರ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 24)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.